**IIನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ**

**OS No**.293/2011

**PW**.2

**ದಿನಾಂಕಃ 21.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು 1 ಮತ್ತು 3ನೇ ಪ್ರತಿವಾದಿಪರ ಶ್ರೀಃ GRS ವಕೀಲರಿಂದ.**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಮ್ಮ ವಕೀಲರು ನೀಡಿರುತ್ತಾರೆ. ಈ ದಾವೆಯನ್ನು ಪಾಲು ವಿಭಾಗ ಕೋರಿ ಸಲ್ಲಿಸಿದ್ದು ಇರುತ್ತದೆ. ಎಲ್ಲಾ ಸರ್ವೇ ನಂಬರುಗಳು ನನಗೆ ನೆನಪಿಲ್ಲ ಸರ್ವೇ ನಂ.313, 352 ಮತ್ತು 320 ಹಾಗೂ ಇತರೇ ಸರ್ವೇ ನಂಬರುಗಳ ಮೇಲೆ ಪಾಲು ವಿಭಾಗ ಕೋರಿ ದಾವೆ ಸಲ್ಲಿಸಿರುತ್ತೇನೆ. ಸದರಿ ಮೂರು ಸರ್ವೇ ನಂಬರುಗಳು ಹಾಗೂ ಇತರ ಸರ್ವೇ ನಂಬರುಗಳ ಮೇಲೆ ದಾವೆ ಹಾಕಿರುತ್ತೇನೆ. ಈ ದಾವೆಯನ್ನು ನಾನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಪೂರ್ವದಲ್ಲಿ ನನ್ನ ಸಹೋದರ ನಾರಾಯಣ ಸಲ್ಲಿಸಿರುತ್ತಾನೆ ಎಂದರೆ ಸಾಕ್ಷಿಯು ಸದರಿ ನಾರಾಯಣ ಹಿಂದಿ ತೆಗೆದುಕೊಂಡಿರುವುದರಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುವ ಪೂರ್ವದಲ್ಲಿ ಯಾವಾ ದಾಖಲೆಗಳನ್ನು ಹಾಜರುಪಡಿಸುತ್ತಾರೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ಎಷ್ಟು ಸರ್ವೇ ನಂಬರು ಮತ್ತು ಕ್ಷೇತ್ರಗಳ ಮೇಲೆ ದಾವೆಯನ್ನು ಸಲ್ಲಿಸಲಾಗಿದೆ

ಎಂಬುದರ ಕುರಿತು ನಾನು ತಿಳಿದುಕೊಂಡಿರುತ್ತೇನೆ. 12 ಜಮೀನುಗಳ ಮೇಲೆ ದಾವೆಯನ್ನು ಸಲ್ಲಿಸಲಾಗಿರುತ್ತವೆ. 12 ಜಮೀನುಗಳ ಸರ್ವೇ ನಂಬರು ಮತ್ತು ಕ್ಷೇತ್ರಗಳ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಪ್ರತಿಯೊಂದು ಜಮೀನಿನ ಚಕ್ಕ ಬಂದಿ ನನಗೆ ಹೇಳಲು ಬರುವುದಿಲ್ಲ.

2. ಈ ದಾವೆಯ ಮೂಲ ವಾದಿ ನಾರಾಯಣ ಬುಜಂಗ ಪಾಟೀಲರವರ ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ 3ನೇ ಪ್ರತಿವಾದಿ ತಾನಾಜಿ ಬುಜಂಗ ಪಾಟೀಲರವರ ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಇಬ್ಬರು ಸಾಕ್ಷಿದಾರರು ಕಿರಣ ಮಾರುತಿ ಪಾಟೀಲ ಮತ್ತು ಮಹಾದೇ ಬುಜಂಗ ಪಾಟೀಲರವರ ಸಾಕ್ಷಿ ವಿಚಾರಣೆ ಸಹ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಈ ಪೂರ್ವದಲ್ಲಿ ಯಾರ ಯಾರ ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂಬುದರ ಕುರಿತು ವಿಚಾರಣೆ ಮಾಡಿರುತ್ತೇನೆ. ಈ ಎಲ್ಲಾ ಸಾಕ್ಷಿದಾರರ ಸಾಕ್ಷಿ ವಿಚಾರಣೆ ಆಗಿರುವ ವಿಷಯ ನನಗೆ ಗೊತ್ತಿದ್ದರು ಸಹ ನನಗೆ ಗೊತ್ತಿರುವುದಿಲ್ಲ ಎಂದು ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

3. ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ನಾನು ಮೂಲ ದಾವಾ ನಂ.710/2009ರಂತೆ ದಾವಾ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಇತ್ತು ಎಂದರೆ ಸರಿ. ನಿಡಿ.5 ವಾದಪತ್ರದ ಕೆಳಭಾಗದಲ್ಲಿ ಮಾಡಿರುವ ಸಹಿ ನನ್ನದಾಗಿರುತ್ತದೆ ಎಂದರೆ ಸರಿ. ಈ ದಾವೆಯನ್ನು ಅಪ್ಪಾಜಿ ಮತ್ತು

ತಾನಾಜಿ  ಅಂದರೆ ಪ್ರಸ್ತುತ ದಾವೆಯ 1 ಮುತ್ತ 3ನೇ ಪ್ರತಿವಾದಿಗಳ ವಿರುದ್ಧ ಸಲ್ಲಿಸಲಾಗಿತ್ತು ಎಂದರೆ ಸರಿ. ಮೂಲ ದಾವಾ ನಂ.710/2009ನ್ನು ಸರ್ವೇ ನಂ.313/3 ನೇದರ ಕುರಿತು ಸಲ್ಲಿಸಲಾಗಿರುತ್ತದೆ. ಸದರಿ ಸರ್ವೇ ನಂ.313/3ರಲ್ಲಿ ನಾವು ಮನೆ ಕಟ್ಟುತಿದ್ದು ಅದಕ್ಕೆ ಪ್ರತಿವಾದಿ 1 ಮತ್ತು 3ರವರು ಅಡೆತಡೆ ಮಾಡಿರುತ್ತಾರೆ ಎಂದು ಸಲ್ಲಿಸಲಾಗಿತ್ತು ಎಂದರೆ  ಸಾಕ್ಷಿಯು ನಾವು ಮನೆಯೇ ಕಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ  ಸರಿಯಿದೆ.**

**Sd/-**

**II ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ.  ಬೆಳಗಾವಿ**